**ಸಾಕ್ಷಿಗೆ ದಿನಾಂಕಃ03-03-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.ಎಎ ವಕೀಲರಿಂದ ::**

ನಾನು ಪ್ರತಿವಾದಿಗಳಿಗೆ ನೀಡಿರುತ್ತೇನೆ ಎಂದು ಹೇಳುತ್ತಿರುವ ಹಣಕ್ಕೆ ಸಂಬಂಧಪಟ್ಟಂತೆ ನನ್ನ ಬಳಿ ನಿಪಿ1 ಹೊರತುಪಡಿಸಿ ಇತರೇ ಯಾವುದೇ ದಾಖಲಾತಿ ಇರುವುದಿಲ್ಲ. ದಾವಾ ಶೆಡ್ಯೂಲ್ ಸ್ವತ್ತು ನೀರಾವರಿ ಜಮೀನು ಆಗಿರುತ್ತದೆ ಎಂದರೆ ಸರಿ. ಪ್ರಸ್ತುತದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿಗೆ 40-50 ಲಕ್ಷ ಮೌಲ್ಯ ಇರಬಹುದು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ದಾವಾ ಶೆಡ್ಯೂಲ್ ಸ್ವತ್ತು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಸರ್ವೇ ನಂಬರ್ ನಲ್ಲಿಯೇ ಪ್ರತಿವಾದಿಗಳಿಗೆ ಉಳಿಕೆ ಜಾಗ ಇರುತ್ತದೆ.

ನನಗೆ ದಾವಾ ಶೆಡ್ಯೂಲ್ ಸ್ವತ್ತಿನ ಪಕ್ಕದಲಿಯೇ ಸರ್ವೇ ನಂಬರ್ 13/ಪಿ42 ರಲ್ಲಿ 2 ಎಕರೆ ಜಮೀನು ಇರುತ್ತದೆ. ಕೆಸರುಗೊಪ್ಪ ಗ್ರಾಮದ ಸರ್ವೇ ನಂಬರ್ 33 ಮತ್ತು 34 ರಲ್ಲಿ 2 ಎಕರೆ 2 ಗುಂಟೆ ಜಮೀನು ಸಹ ನನ್ನ ಬಳಿ ಇರುತ್ತದೆ. ನಿಪಿ1 ಕ್ರಯ ಕರಾರು ಪತ್ರಕ್ಕೆ 1 ನೇ ಪ್ರತಿವಾದಿಯ ಮತ್ತೊಬ್ಬ ಮಗಳಾದ 6 ನೇ ಪ್ರತಿವಾದಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಿನದಂದು 6 ನೇ ಪ್ರತಿವಾದಿ ಬರುವುದಾಗಿ ತಿಳಿಸಿ ನಂತರದಲ್ಲಿ ಬಂದಿರುವುದಿಲ್ಲ ಆದರೆ ನಂತರದಲ್ಲಿ ನಿಪಿ2 ರಂತೆ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಹೇಳುವಂತೆ 6 ನೇ ಪ್ರತಿವಾದಿಯು ಯಾವುದೇ ಒಪ್ಪಿಗೆ ಪತ್ರವನ್ನು ನನಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು ನಿಪಿ1 ಕ್ರಯ ಕರಾರು ಪತ್ರವನ್ನು ನಾನು ಹೇಳುವಂತೆ ದಾವಾ ಆಸ್ತಿಯ ಮಾರಾಟಕ್ಕೆ ಮಾಡಿಕೊಟ್ಟಿರುವುದಿಲ್ಲ ಆದರೆ ಅದನ್ನು ನನ್ನಿಂದ ಪಡೆದ ಸಾಲದ ಭದ್ರತೆಗಾಗಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ಪ್ರತಿವಾದಿಗಳು ನನಗೆ ಯಾವತ್ತು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಕ್ರಯ ಕರಾರುಪತ್ರದ ಅಡಿಯಲ್ಲಿ ದಾವಾ ಶೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡುವ ಅವಶ್ಯಕತೆ ಪ್ರತಿವಾದಿಗಳಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ನೀಡಿದ ಸಾಲದ

ಮರುಪಾವತಿ ಬಾಬ್ತು ಮಾತ್ರ ನಿಪಿ1 ಕ್ರಯ ಕರಾರುಪತ್ರವನ್ನು ಮಾಡಿಕೊಟ್ಟಿರುತ್ತಾರೆ ಮತ್ತು ಅದನ್ನು ರದ್ದುಪಡಿಸದೇ ಸುಳ್ಳು ದಾವೆಯನ್ನು ಸೃಷ್ಟಿಸಿ ಅವರ ವಿರುದ್ದ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ1 ಕ್ರಯ ಕರಾರು ಪತ್ರ ಸಾಲದ ಮರು ಪಾವತಿ ಬಾಬ್ತು ಮಾಡಿಕೊಟ್ಟ ಕಾರಣ ಇಲ್ಲಿಯವರೆಗೂ ಅದಕ್ಕೆ ಸಂಬಂಧಪಟ್ಟಂತೆ ಕ್ರಯಪತ್ರ ಆಗಿರುವುದಿಲ್ಲ ಮತ್ತು ನಾನು ಹೇಳುವ ಕಾರಣದಿಂದ ಅಲ್ಲ ಎಂದರೆ ಸರಿಯಲ್ಲ. ನನಗೆ ಸತ್ಯಾಂಶಗಳು ಎಲ್ಲಾ ತಿಳಿದಿದ್ದೂ ಸಹ ಸುಳ್ಳು ವಾದಕಾರಣ ಸೃಷ್ಟಿಸಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: